ಇಷ್ಟು ದಿನಗಳ ಈ ಪರಕಾಯ ಪ್ರವೇಶ, ಅಲೆದಾಟ
ಅರೆ ಇನ್ನೇನು ಮುಗಿದೇ ಹೋಗುವುದೆ
ಅದ್ಹೇಗೆ ಸಾಧ್ಯ ಏನೆಲ್ಲಾ ಬಾಕಿ ಇದೆ, ಇನ್ನೇನೋ ಈಗಷ್ಟೆ
ಶುರುವಾಗಿದೆ ಅದ್ಹೇಗೆ ಮುಗಿದೀತು ಇಷ್ಟರಲೆ ಎಲ್ಲಾ...
ಮೈಥಿಲಿ ಇನ್ನೂ ಮನೆ ತಲುಪಿಲ್ಲ, ಆಪರೇಷನ್ ಥೇಟರಿನ
ಬಾಗಿಲಿಗೆ ಬಂದು ದಾದಿ ಇನ್ನೂ ಹೆಸರು ಕೂಗಿಲ್ಲ,
ಪಕ್ಕದ ಮನೆಯ ತಂತಿಯ ಮೇಲೆ ಒಣ ಹಾಕಿದ ಉಡುಪುಗಳು
ಮೊನ್ನೆಯಿಂದ ಹಾಗೇ ಇವೆ ತೆಗೆದಿಲ್ಲಾ, ಟ್ರೂ ಕಾಪಿಯ ಸಹಿ
ತಾಳೆ ಆಗುತ್ತಿಲ್ಲ, ಮೊಮ್ಮಗುವಿಗಿನ್ನೂ ನಾಮಕರಣ ಆಗಿಲ್ಲ...
ಮತ್ತೆ ಇವೆಲ್ಲ ಇಷ್ಟರಲೆ ಪೂರೈಸೀತು ಹೇಗೆ

ಕೂತಲ್ಲೇ ಪಾಸಿಲ್ಲದೆ ಸೀಸನ್ನುಗಳ ದಾಟಿದೆವು
ಪೀಳಿಗೆಗಳ ಜೀಕಿದೆವು ಅಲ್ಲಲ್ಲಿ ಪುರ್ರೆಂದು
ಬಣ್ಣದ ಪತಂಗಗಳಾಗಿ ಅಕ್ಷರಗಳು ಹಾರಿಹೋದವು
ನಡುವೆಲ್ಲೋ ಉಪಾಹಾರಕ್ಕೆಂದು ದಾರಿಯಲಿ ಇಳಿದಾಗ
ತಪ್ಪಿ ಬೇರೊಂದೇ ಬಸ್ಸು ಹಿಡಿದಂತೆ
ಹಿಂದೆಮುಂದೆ ಅಕ್ಕಪಕ್ಕ ಬೇರೆ ಪಥಿಕರು
ಮೇಲಿನ ರ್‍ಯಾಕಿನ ಲಗೇಜು, ಬಸ್ಸಿನ ಆವಾಜು, ಘಾಟು
ಎಲ್ಲ ಬೇರೆ

ಮತ್ತೆ ಕೆಲವು ಪುಟ ಹಿಂದೆ ಹೋಗಿ
ಬಸ್ಸು ಬದಲಿಸಬೇಕೆ ಮತ್ತೆ ಹೊಲ ಕಾಯುವ ಮಂಚಿಗೆಯಲಿ
ಕೂತು ಬೆಳದಿಂಗಳು ಇಬ್ಬನಿಯಾಗುವುದನು ಆಲಿಸಬೇಕೆ
ಕಿವಿ ಮಡಿಸಿಟ್ಟ ಪುಟದ ನೋವಿಗೆ ಜವಾಬ್ದಾರರು ಯಾರು
ಹಾಗೆಲ್ಲ ಏನೂ ಮುಗಿಯುವುದಿಲ್ಲ
ಮತ್ತೆ ಅದೇ ತಿರುವಲ್ಲಿ ಅದೇ ಜನ ಅದೇ ಥರ ಸಿಕ್ಕರೆ
ಹೊಸ ಮಾತು ಆಡಬಹುದಲ್ಲ

